# <u>ಜಯ ಮಂಗಳಂ – ಜಯತುಂಗ ಲಕ್ಷ್ಮೀಪತಿ ನರಸಿಂಹಗೆ</u>

**Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.

ರಾಗ: ಶ್ರೀ ತಾಳ: ಝಂಪೆ

ಜಯ ಮಂಗಳಂ ನಿತ್ಯ ಶುಭ ಮಂಗಳಂ
ಜಯತುಂಗ ಲಕ್ಷ್ಮೀಪತಿ ನರಸಿಂಹಗೆ ॥ ಪ ॥

ಕಂದರ್ಪನಯ್ಯಗೆ ಕೋಟಿ ಲಾವಣ್ಯಗೆ
ಮಂದರೋದ್ಧಾರಗೆ ಮಧುಸೂದನನಿಗೆ
ಕಂದ ಪ್ರಹಲ್ಲಾದನನು ಕಾಯ್ದ ದೇವನಿಗೆ ಶ್ರೀ-
ಇಂದಿರಾ ರಮಣ ಸರ್ವೋತ್ತಮನಿಗೆ ॥ ೧ ॥

ಕರಿರಾಜ ವರದನಿಗೆ ಕರುಣಾ ಸಮುದ್ರನಿಗೆ
ಸರಸಿಜೋದ್ಭವ ಭವ-ವಂದ್ಯ ಹರಿಗೆ
ಗಿರಿಯರಸು ಕಾವೇರಿ ಪುರದ ರಂಗಯ್ಯಗೆ
ಗಿರಿರಾಜ-ಪತಿ ವಂದ್ಯ ಸುರರ ನಿಧಿಗೆ ॥ ೨ ॥

ಅಂಬರೀಷನ ಶಾಪ ಅಪಹರಿಸಿದವನಿಗೆ
ತುಂಬುರ ನಾರದ ಮುನಿ ವಂದ್ಯಗೆ
ಕಂಬು ಕಂದರ ಪುರಂದರ ವಿಠ್ಠಲ ರಾಯಗೆ
ಅಂಬುಜನಾಭಗೆ ಅಜನ ಪಿತಗೆ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಮಧು** = ಕೈಟ ಭಾಸುರನ ಅಣ್ಣ, ವಟಪತ್ರ ಶಾಯಿ ನಾರಾಯಣನ ಕರ್ಣ ಮಲದಿಂದ ಹುಟ್ಟಿದವನು

**ತುಂಗ** = ಶ್ರೇಷ್ಠ

**ಗಿರಿಯರಸ** = ತಿರುಪತಿಯ ಶ್ರೀನಿವಾಸ

**ಕಾವೇರಿ ಪುರ** = ಶ್ರೀರಂಗಪಟ್ಟಣ

**Classification:** Keerthane
**Ankita:** purandara vittala
**Location:** NA
**Category:** Mangala Song, Vishnu Stuti
**Sub-Category:** Vishnu, Mangala, karuna, Samudra, asura, prahallada, Narasimha, sura, Lakshmi, parvata, Krishna, ranga, kaveri, bhava, ambarisha, shapa, narada, muni, brahma,
**Pravachana:** NA
**Explanation:** NA